# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

ಫೋನ್ ನಂ. :0831-2565207/237

ಫ್ಯಾಕ್ಸ್ : 0831-2565240

## ಪರೀಕ್ಷಾ ವಿಭಾಗ

Website: www.rcub.ac.in

E-mail: rcuregev@gmail.com


ಸಂಖ್ಯೆ: ರಾಚವಿ/ಪರೀಕ್ಷಾ ವಿಭಾಗ/ಬೆಳಗಾವಿ/2020-21/1861 ದಿನಾಂಕ:31.08.2020

## ಸುತ್ತೋಲೆ

ವಿಷಯ: 2019-20 ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಜರುಗಿಸುವ ಕುರಿತು.

ಉಲ್ಲೇಖ:
1. UGC ಪತ್ರ ಸಂಖ್ಯೆD.O.NO F.1.1/2020 (Secy), ದಿನಾಂಕ:08.07.2020
2. ಸರಕಾರದ ಆದೇಶ ಸಂಖ್ಯೆED 197 UNE 2020 ಬೆಂಗಳೂರು ದಿನಾಂಕ: 10.07.2020
3. ಡೀನರ ಸಭೆಯ ನಿರ್ಣಯದ ಪತ್ರ ಸಂಖ್ಯೆ: ರಾಚವಿವಿ:2020, ದಿನಾಂಕ: 30.07.2020

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ತೀವ್ರವಾಗಿ ವ್ಯಾಪಿಸಿರುವ ಹಿನ್ನೆಲೆಯಲ್ಲೆ, ಭಾರತ ಸರಕಾರದ ಗೃಹ ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಪತ್ರದನ್ವಯ, UGCಯ ಪರಿಷ್ಕೃತ ಮಾರ್ಗಸೂಚಿಗಳ ನಿರ್ದೇಶನದಂತೆ, ಹಾಗೂ ಕರ್ನಾಟಕ ಸರಕಾರದ ಉಲ್ಲೇಖಿತ ಪತ್ರದನ್ವಯದ ಮಾರ್ಗಸೂಚಿಗಳಲ್ಲಿ ನಿರ್ದೇಶಿಸಿದಂತೆ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳನ್ನು ಜರುಗಿಸಲು ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

ಈ ಆದೇಶಗಳನ್ನು ಜಾರಿಗೆ ತರುವಲ್ಲಿ ವಿಶ್ವವಿದ್ಯಾಲಯವು ತನ್ನದೇ ಆದ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು 2019-20 ಸಾಲಿನ ಸ್ನಾತಕ / ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳನ್ನು ಸೆಪ್ಟೆಂಬರ್ ತಿಂಗಳಲ್ಲಿ ಆಯೋಜಿಸಲು ತೀರ್ಮಾನಿಸಿದೆ. ಕಾರಣ ಈ ಕೆಳಗಿನ ಮಾರ್ಗಸೂಚಿಗಳ ಸೂತ್ರಗಳನ್ನು ಅನುಸರಿಸಿ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳು / ವಿಭಾಗಗಳು ಎಸ.ಒ.ಪಿ. ನಿಯಮಾವಳಿ ಅನುಸರಿಸಿ ಪರೀಕ್ಷೆ ನಡೆಸಲು ಸೂಚಿಸಲಾಗಿದೆ.

**1. ಸ್ನಾತಕ ಪದವಿ ಅಂತಿಮ ಸೆಮಿಸ್ಟರ್ ಪರೀಕ್ಷೆ:**

- UGC ಮಾರ್ಗಸೂಚಿ ಹಾಗೂ ಕರ್ನಾಟಕ ಸರಕಾರದ ಆದೇಶನ್ವಯ ಕಾಲಕಾಲಕ್ಕೆ ಹೊರಡಿಸಿರುವ SOP ಗಳನ್ನು ಪಾಲಿಸುವ ಶರತ್ತುಗಳಿಗೆ ಒಳಪಟ್ಟು ವೇಳಾಪಟ್ಟಿಗೆ ಅನುಸಾರವಾಗಿ ಸಾಂಪ್ರಾದಾಯಕ ಪದ್ಧತಿಯಲ್ಲಿ ಸ್ನಾತಕ ಪರೀಕೆಗಳನ್ನು ಜರುಗಿಸಲಾಗುವದು.
- ಸ್ನಾತಕ ಪದವಿಯ ಅಂತಿಮ ಸೆಮಿಸ್ಟರಿನ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆಯುವುದು. ಸದರಿ ಪರೀಕ್ಷೆಗಳಿಗೆ ವಿಧ್ಯಾರ್ಥಿಗಳು ಅವಶ್ಯವೆನಿಸಿದಲ್ಲಿ ಹಾಜರಾಗಬಹುದು ಮತ್ತು ಇದು ಕಡ್ಡಾಯವಾಗಿಲ್ಲ.
- ಸ್ನಾತಕ ಪದವಿಯ 6ನೇ ಸೆಮಿಸ್ಟರಿನ ಎಲ್ಲ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವದು. ವಿಧ್ಯಾರ್ಥಿಗಳು 2ನೇ ಹಾಗೂ 4ನೇ ಸೆಮಿಸ್ಟರ್ ಥೆಯರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಬಾಕಿ ಉಳಿಸಿಕೊಂಡಲ್ಲಿ (Backlog Subject) ಅಂತಹ ವಿಧ್ಯಾರ್ಥಿಗಳು ಸಹ ಪರೀಕ್ಷೆಗಳನ್ನು

ಬರೆಯಬಹುದು. ಸದರಿ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಭರಿಸಿದ್ದಲ್ಲಿ ಮಾತ್ರ ಅವಕಾಶವಿದೆ. ಅಂಥಹ ವಿಷಯಗಳ ಪರೀಕ್ಷೆ ಬರೆದು ಉತ್ತೀರ್ಣರಾದ ನಂತರವೇ 2ನೇ ಮತ್ತ 4ನೇ ಸೆಮಿಸ್ಟರ್ ವಿಧ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗುವುದು.

- ಒಂದು ವೇಳೆ ವಿಧ್ಯಾರ್ಥಿಗಳು ಯಾವದೇ ಕಾರಣಕ್ಕೆ ಈ ಬಾರಿ ಪೂರ್ಣ ಪರೀಕ್ಷೆಗೆ ಅಥವಾ ಕೆಲವು ಪರೀಕ್ಷೆಗಳಿಗೆ ಹಾಜರಾಗಲು ಆಗದಿದ್ದಲ್ಲಿ ಈ ಮುಂದೆ ವಿಶ್ವವಿದ್ಯಾಲಯ ನಡೆಸುವ ವಿಶೇಷ ಪರೀಕ್ಷೆಗೆ ಕುಳಿತುಕೊಳ್ಳಬಹುದು ಮತ್ತು ಈ ಒಂದು ಪರೀಕ್ಷೆಯನ್ನು Fresh (ಮೊದಲ ಪ್ರಯತ್ನ) ವೆಂದು ಪರಿಗಣಿಸಲಾಗುವದು. ಈ ಅವಕಾಶ ಕೇವಲ 2019-20 ನೇ ಶೈಕ್ಷಣಿಕ ಸಾಲಿನ ವಿಧ್ಯಾರ್ಥಿಗಳಿಗೆ ಒಂದು ಬಾರಿ ಮಾತ್ರ ಅನ್ವಯವಾಗುತ್ತದೆ, ಅಂಥಹ ವಿಧ್ಯಾರ್ಥಿಗಳು 2019-20 ನೇ ಸಾಲಿನ 6ನೇ ಸೆಮಿಸ್ಟರ್ ಪರೀಕ್ಷೆಗೆ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕ ಪಾವತಿ ಮಾಡಿದ ವಿಧ್ಯಾರ್ಥಿಗಳಗೆ ಮಾತ್ರ ಅನ್ವಯಿಸಲಾಗುವುದು.
- ವಿಧ್ಯಾರ್ಥಿಗಳ ಹಿತ ದೃಷ್ಟಿಯಿಂದ ವಿಶ್ವವಿದ್ಯಾಲಯವು ಪ್ರಸ್ತುತ 6ನೇ ಸೆಮಿಸ್ಟರ್ ಪರೀಕ್ಷೆಯ ಜೊತೆಗೆ 5ನೇ ಸೆಮಿಸ್ಟರ್ (Repeater) ವಿದ್ಯಾರ್ಥಿಗಳಿಗೂ ಸಹ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದೆ. ಅಂತಹ ವಿಧ್ಯಾರ್ಥಿಗಳು ನಿಗದಿತ ಶುಲ್ಕ ಪಾವತಿಸಿ ನಿಯಮಾನುಸಾರ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದವರಿಗೆ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.

**ಸ್ನಾತಕೋತ್ತರ ಪದವಿ ಅಂತಿಮ ಸೆಮಿಸ್ಟರ್ ಪರೀಕ್ಷೆ:**

- ಸ್ನಾತಕೋತ್ತರ ಪದವಿ 2ನೇ ಹಾಗೂ 4ನೇ ಸೆಮಿಸ್ಟರನ ರಿಪೀಟರ್ ಹಾಗೂ 4ನೇ ಸೆಮೆಸ್ಟರ್ ರೆಗ್ಯುಲರ್ (ಅಂತಿಮ) ಪರೀಕ್ಷೆಗಳನ್ನು ಯುಜಿಸಿ ಮತ್ತು ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಕಾಲಕಾಲಕ್ಕೆ ಹೊರಡಿಸುವ SOP ಗಳನ್ನು ಪಾಲಿಸುವ ಶರತ್ತುಗಳಿಗೆ ಒಳಪಟ್ಟು ಸಾಂಪ್ರದಾಯಿಕ ಪದ್ಧತಿಯಲ್ಲಿ ಪರೀಕ್ಷೆ ವೇಳಾಪಟ್ಟಿ ಅನುಸಾರವಾಗಿ ಜರುಗಿಸಲಾಗುವುದು.
- ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ (ಸೆಮಿಸ್ಟರ) ಎಲ್ಲ ವಿಧ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುವದು, ಒಂದು ವೇಳೆ ಸ್ನಾತಕೋತ್ತರ ಪದವಿಯ ಯಾವುದೇ ವಿಧ್ಯಾರ್ಥಿಯು ಎರಡನೇ ಸೆಮಿಸ್ಟರಲ್ಲಿ ಥಿಯರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಬಾಕಿ ಉಳಿಸಿಕೊಂಡಲ್ಲಿ (Backlog Subject) ಅಂತಹ ವಿಧ್ಯಾರ್ಥಿಗಳು ಸಹ ಪರೀಕ್ಷೆಯನ್ನು ಬರೆಯುವುದು. ಒಂದು ವೇಳೆ ವಿದ್ಯಾರ್ಥಿಗಳು ಗೈರು ಹಾಜರಾತಿ ಹೊಂದಿದ್ದಲ್ಲಿ ಅಂತಹ ವಿಧ್ಯಾರ್ಥಿಗಳು ಮುಂಬರುವ ಪರೀಕ್ಷೆಯಲ್ಲಿ ಕುಳಿತುಕೊಂಡು ಪರೀಕ್ಷೆಗಳನ್ನು ಉತೀರ್ಣಮಾಡಿಕೊಳ್ಳಲು ಅವಕಾಶವಿದೆ.
- ಒಂದು ವೇಳೆ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೆ ಈ ಬಾರಿ ಪೂರ್ಣ ಪರೀಕ್ಷೆಗೆ ಅಥವಾ ಕೆಲವು ಪರೀಕ್ಷೆಗಳಿಗೆ ಹಾಜರಾಗಲು ಆಗದಿದ್ದಲ್ಲಿ ಮುಂದೆ ವಿಶ್ವವಿದ್ಯಾಲಯವು ನಡೆಸುವ ವಿಶೇಷ ಪರೀಕ್ಷೆಯಲ್ಲಿ ಹಾಜರಾಗಬಹುದಾಗಿದೆ. ಈ ಒಂದು ಅವಕಾಶ ಕೇವಲ 2019-20ನೇ ಶೈಕ್ಷಣಿಕ ವರ್ಷಕ್ಕೆ ಒಂದು ಬಾರಿ ಮಾತ್ರ ಅನ್ವಯವಾಗುತ್ತದೆ. ಅಂತಹ ವಿದ್ಯಾರ್ಥಿಗಳು 2019-20ನೇ ಶೈಕ್ಷಣಿಕ ಸಾಲಿನ 4ನೇ ಸೆಮಿಸ್ಟರಗೆ ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕ ಪಾವತಿಸಿದಲ್ಲಿ ಹಾಗೂ ನಿಗದಿತ ಅರ್ಜಿಯನ್ನು ನಿಯಮಾನುಸಾರ ಸಲ್ಲಿಸಿದವರಿಗೆ ಮಾತ್ರ ಅನ್ವಯವಾಗುತ್ತದೆ. ವಿದ್ಯಾರ್ಥಿಗಳ 75% ಹಾಜರಾತಿಯು

ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಯು ತಾನು ತೇರ್ಗಡೆಯಾದ ಸೆಮಿಸ್ಟರ್ ಫಲಿತಾಂಶವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಮುಂದಿನ ಸೆಮಿಸ್ಟರ್ ಪರೀಕ್ಷೆಯಲ್ಲಿ ಪರೀಕ್ಷೆಯನ್ನು ಬರೆಯಲು ಇಚ್ಛಿಸಿದಲ್ಲಿ ಅಂತಹ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗುವುದು. ಹಾಗೂ ಆ ಅವಕಾಶವನ್ನು ಮೊದಲ ಪ್ರಯತ್ನವೆಂದು ಪರಿಗಣಿಸಲಾಗುವುದು.

2. **ಪ್ರಾಯೋಗಿಕ ಪರೀಕ್ಷೆಗಳು (ಅಂತಿಮ ಸೆಮಿಸ್ಟರ್):**

- 2019-20 ನೇ ಸಾಲಿನ ಪ್ರಾಯೋಗಿಕ ಪರೀಕ್ಷೆಗಳಿಗೆ ಮಾತ್ರ ಅನ್ವಯವಾಗುವಂತೆ ಸ್ನಾತಕ/ಸ್ನಾತಕೋತ್ತರ ಪದವಿ ವಿಧ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಆಯಾ ಮಹಾವಿದ್ಯಾಲಯ/ವಿಭಾಗಗಳಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ಆಂತರಿಕ ಪರೀಕ್ಷಕರಿಂದಲೇ ಜರುಗಿಸುವುದು, ಸದರಿ ಪರೀಕ್ಷೆಯು ವಿಧ್ಯಾರ್ಥಿಗಳಿಗೆ ಅವಶ್ಯವೆನಿಸಿದಲ್ಲಿ ಹಾಜರಾಗಬಹುದು ಮತ್ತು ಇದು ಕಡ್ಡಾಯವಲ್ಲ.
- ಒಂದು ವೇಳೆ ಸಂಯೋಜಿತ ಮಹಾವಿದ್ಯಾಲಯ/ವಿಭಾಗಗಳಲ್ಲಿ ಪರಿಣಿತ ಪರೀಕ್ಷಕರು ಲಭ್ಯವಿಲ್ಲದಿದ್ದಲ್ಲಿ ಸ್ಥಾನಿಕವಾಗಿ ಲಭ್ಯವಿರುವ ಪರೀಕ್ಷಕರನ್ನು ಆಹ್ವಾನಿಸಿ ಪ್ರಾಯೋಗಿಕ ಪರೀಕ್ಷೆಗಳನ್ನು ಕೈಗೊಳ್ಳುವುದು, ಹಾಗೆ ಅಂತಿಮಗೊಳಿಸಿದ ಅಂಕಗಳನ್ನು ನಿಯಮ ಅನುಸರಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.
- ಪ್ರಾಯೋಗಿಕ ಪರೀಕ್ಷೆಯನ್ನು ಕೈಗೊಳ್ಳಲು ಯಾವ ಪರೀಕ್ಷಕರು ಸ್ಥಾನಿಕವಾಗಿ ಲಭ್ಯವಿಲ್ಲದಿದ್ದಲ್ಲಿ ಸಮೀಪದ ಇನ್ನಿತರ ಮಹಾವಿದ್ಯಾಲಯಗಳಿಂದ/ವಿಶ್ವವಿದ್ಯಾಲಯಗಳಿಂದ ಪರೀಕ್ಷಕರನ್ನು ಆಹ್ವಾನಿಸುವುದು.
- ಮಹಾವಿದ್ಯಾಲಯಗಳು/ವಿಭಾಗಗಳು ಸಾಂಪ್ರದಾಯ ಪದ್ಧತಿಯನ್ನು ಅನುಸರಿಸಿ ವಿಶ್ವವಿದ್ಯಾಲಯದ ನಿಯಾಮಾವಳಿಗಳನ್ನು ಪಾಲಿಸಿ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವುದು ಮತ್ತು ಆಯಾ ಮಹಾವಿದ್ಯಾಲಯಗಳು ಸದರಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಿ ಅಂತಿಮಗೊಳಿಸಲು ಆಯಾ ಕಾಲೇಜಿನ ಪ್ರಾಂಶುಪಾಲರು ಜವಾಬ್ದಾರಾಗಿರುತ್ತಾರೆ.
- ಪ್ರಾಯೋಗಿಕ ಪರೀಕ್ಷೆ ಮುಕ್ತಾಯಗೊಂಡ ನಂತರ ಅದೇ ದಿನವೇ ಮೌಲ್ಯಮಾಪನ ಮಾಡಿ ಪರೀಕ್ಷಕರು ಹಾಗೂ ಪ್ರಾಂಶುಪಾಲರು ಪರಿಶೀಲಿಸಿ ವಿಷಯ, ಬ್ಯಾಚ್, ದಿನಾಂಕ ಖಾತ್ರಿ ಪಡಿಸಿಕೊಂಡು ಅಂತಿಮವಾಗಿ OASISನಲ್ಲಿ ಭರ್ತಿ ಮಾಡುವುದು ಮತ್ತು ಭರ್ತಿಮಾಡಿದ ಅಂಕಗಳ ಪಟ್ಟಿಯನ್ನು ಮುದ್ರಣ ಪಡೆದುಕೊಂಡು ವಿಭಾಗದ ಮುಖ್ಯಸ್ಥರು ಆಂತರಿಕ ಪರೀಕ್ಷಕರ ಸಹಿಯೊಂದಿಗೆ ಪೂರ್ಣಗೊಳಸಿ ಲಕೋಟೆಯಲ್ಲಿ ಇಟ್ಟು ಶೀಲ್‌ಮಾಡಿ ಪ್ರಾಂಶುಪಾಲರ ಮುಖಾಂತರ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ಮಹಾವಿದ್ಯಾಲಯದಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳುವುದು ಹಾಗೂ ವಿಶ್ವವಿದ್ಯಾಲಯ ತಮಗೆ ತಿಳಿಸಿದಲ್ಲಿ ದಾಖಲಾತಿಗಳನ್ನು ನೀಡುವುದು.
- ವಿದ್ಯಾರ್ಥಿಗಳು 6ನೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಯ ಜೊತೆಗೆ ಬಾಕಿ ಉಳಿಸಿಕೊಂಡಿರುವ (Backlog) ವಿಷಯಗಳನ್ನು ಬರೆಯಲು ಅವಕಾಶವಿರುತ್ತದೆ.

4. ಪ್ರೊಜೆಕ್ಟ್ /ಫಿಲ್ಡ್ ವರ್ಕ/ದಸರ್ಟೇಶನ್ ಪರೀಕ್ಷೆ (ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ)

- 2019-20 ನೇ ಸಾಲಿನ ಅಂತಿಮ ಸೆಮಿಸ್ಟರಿನ ಸ್ನಾತಕೋತ್ತರ ಪದವಿಗಾಗಿ ಯಾವ ಯಾವ ವಿಭಾಗಗಳಲ್ಲಿ/ವಿಷಯಗಳಲ್ಲಿ Project Work / Field Work / Dissertation ಕಡ್ಡಾಯವಾಗಿದೆಯೋ ಅಂತಹ ಸಂದರ್ಭದಲ್ಲಿ Review based/ Secondary data based Projects ಗಳಿಗೆ ಮಾತ್ರ ಆದ್ಯತೆ ನೀಡಿ ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು / ಸಂಯೋಜನಾಧಿಕಾರಿಗಳು ತಮ್ಮ ವಿಭಾಗಕ್ಕೆ ಸಂಬಂಧಿಸಿದ ವಿಷಯವಾರುಗಳಿಗೆ ಹಿರಿಯ ಪ್ರಾಧ್ಯಾಪಕರುಗಳಿಂದ ಪರೀಕ್ಷೆ ನಡೆಸಿದ Project / Dissertation ನ Hand Written Copy ಯನ್ನು ನಿಯಮಾನುಸಾರ ಕುಲಸಚಿವರು (ಪರೀಕ್ಷಾಂಗ) ರವರ ಕಚೇರಿಗೆ ತಲುಪಿಸುವುದು.
- ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿದ ಅಂಕಗಳನ್ನು ಕಡ್ಡಾಯವಾಗಿ BOE ಅಧ್ಯಕ್ಷರು ಪರೀಕ್ಷೆ ನಡೆದ ದಿನವೇ Online Portal ಮುಖಾಂತರ ಭರ್ತಿಮಾಡುವದು ಮತ್ತು ಭರ್ತಿಮಾಡಿದ ನಂತರ ಮುದ್ರಿತ ಅಂಕಪಟ್ಟಿಯನ್ನು ಪರೀಕ್ಷಕರ ಸಹಿಯೊಂದಿಗೆ ಮುಚ್ಚಿದ ಲಕೋಟೆಯೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವದು.
- ಇ) Project Work / Dissertation ಕಾರ್ಯವನ್ನು ಮುಕ್ತಾಯಗೊಳಿಸಲು ಮತ್ತು ವಿಭಾಗದ ಅಧ್ಯಕ್ಷರಿಗೆ ಸಲ್ಲಿಸಲು ಆಯಾ ವಿಭಾಗಗಳ ನಿಯಮಗಳನ್ನು ಅನುಸರಿಸಿ ಕಾರ್ಯಕೈಗೊಳ್ಳುವದು.
- ಈ) Internship/In-house Practice/Industrial training Project work/ Dissertation Viva-voce ಪರೀಕ್ಷೆ ಇದ್ದಲ್ಲಿ ಅದನ್ನು ಆಂತರಿಕ ಪರೀಕ್ಷಕರಿಂದಲೇ ಕಾರ್ಯ ಜರುಗಿಸುವುದು ಅಥವಾ ಪರಿಣಿತ ಆಂತರಿಕ ಪರೀಕ್ಷಕರು ಲಭ್ಯವಿಲ್ಲದಿದ್ದಲ್ಲಿ ಬಾಹ್ಯ ಪರೀಕ್ಷಕರಿಂದ ಪರೀಕ್ಷೆ ಜರುಗಿಸಲು ಅನುಮತಿ ಇರುತ್ತದೆ.

3/1/8

ಕುಲಸಚಿವರು(ಮೌಲ್ಯಮಾಪನ)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ